
# ಎಜಿಂಗ್ ಐಜ್

ಯೇಜ್ ರಿಲೇಟೆಡ್ ಡೀಜನರೇಶನ್‌ನ (ಎಎಮ್‌ಡಿ)
ಲಕ್ಷಣಗಳು, ತಡೆಗಟ್ಟುವಿಕೆ ಮತ್ತು  ಚಿಕಿತ್ಸೆ




## ಮಾನವ ಕಣ್ಣುಗಳು




ಮಾನವ ಕಣ್ಣುಗಳನ್ನು ಶರೀರದ ಅತ್ಯಂತ ಜಟಿಲವಾದ ಅಂಗವೆಂದು ಪರಿಗಣಿಸಲಾಗುತ್ತದೆ.

ಕಾರ್ನಿಯಾ ಮೂಲಕ ಬೆಳಕು ಪ್ರವೇಶ ಮಾಡುತ್ತದೆ, ಕಣ್ಣು ಗೊಂಬೆ ಎಂದು ಕರೆಯಲಾಗುವ ಪಾಪೆಯ ತೆರೆದ ಭಾಗದ ಮೂಲಕ ಹಾದು ಹೋಗುತ್ತದೆ ಮತ್ತು ನಂತರ ಲೆನ್ಸ್ ಮೇಲೆ ಹಾದು ಹೋಗಿ ಕಣ್ಣಿನ ಹಿಂಭಾಗದಲ್ಲಿರುವ ಇನ್‌ರ್ ಲೈನಿಂಗ್ ರೆಟಿನಾ (ಅಕ್ಷಿಪಟಲ) ಮೇಲೆ ಬೀಳುತ್ತದೆ.



## ರೆಟಿನಾ



ರೆಟಿನಾ ಬೆಳಕಿನ ಸಂವೇದನೆಯ ಜೀವಕೋಶಗಳಿಂದ ಅಥವಾ ರಾಡ್ಸ್ ಮತ್ತು ಕೋನ್ಸ್ ಎಂದು ಕರೆಯಲಾಗುವ ಫೊಟೊರಿಸೆಪ್ಟರ್ಸ್‌ನಿಂದ ಮಾಡಲ್ಪಟ್ಟಿರುತ್ತದೆ. ಮ್ಯಾಕ್ಯುಲಾ ರೆಟಿನಾದ ಕೇಂದ್ರಭಾಗದಲ್ಲಿದ್ದು ಇದು ತೀಕ್ಷ್ಣ ಕೇಂದ್ರ ದೃಷ್ಟಿಗೆ ಕಾರಣವಾಗಿರುತ್ತದೆ. ಫೊವಿಯಾ ಮ್ಯಾಕ್ಯುಲಾದಲ್ಲಿನ ಒಂದು ಚಿಕ್ಕ ಒತ್ತಡವಾಗಿದ್ದು ಎಲ್ಲಕ್ಕಿಂತ ಸೂಕ್ಷ್ಮಾತಿ ಸೂಕ್ಷ್ಮ ದೃಷ್ಟಿಯನ್ನು ಒದಗಿಸುತ್ತದೆ. ಅಕ್ಷಿಪಟಲದ(ರೆಟಿನಾ) ಮೇಲೆ ಪ್ರಕಾಶ ಬಿದ್ದಾಗ, ಫೊಟೊರಿಸೆಪ್ಟರ್ಸ್ ಆಪ್ಟಿಕ್ ನರ್ವ್‌ನೊಂದಿಗೆ ಮಿದುಳಿಗೆ ಸಂದೇಶ ಕಳುಹಿಸುತ್ತದೆ, ಇದರಿಂದಾಗಿ ವಸ್ತು ಕಂಡುಬರುತ್ತದೆ.

## ಯೇಜ್ ರಿಲೇಟೆಡ್ ಡೀಜನರೇಶನ್ (ಎಎಮ್‌ಡಿ) ಎಂದರೇನು?

ಕೆಲವು ವಯಸ್ಸಾದ ಜನರಲ್ಲಿ ಶರೀರದ ನೈಸರ್ಗಿಕ ವಯಸ್ಸಾಗುವ ಪ್ರಕ್ರಿಯೆಯಾಗಿ ಮ್ಯಾಕ್ಯುಲರ್ ಡೀಜನರೇಶನ್ ಉಂಟಾಗುತ್ತದೆ. ಮ್ಯಾಕ್ಯುಲರ್ ಸಮಸ್ಯೆಗಳಲ್ಲಿ ಹಲವಾರು ಪ್ರಕಾರಗಳಿವೆ, ಅದರಲ್ಲಿ ಅತ್ಯಂತ ಸಾಮಾನ್ಯವಾಗಿರುವ ಸಮಸ್ಯೆಯೆಂದರೆ ವಯಸ್ಸಿಗೆ ಸಂಬಂಧಿಸಿದ ಮ್ಯಾಕ್ಯುಲರ್ ಡೀಜನರೇಶನ್(ಎಎಮ್‌ಡಿ).

ಮ್ಯಾಕ್ಯುಲರ್ ಡೀಜನರೇಶನ್ ಕೆಳಗಿನಂಥ ಹಲವಾರು ಅಂಶಗಳಿಂದ ಉಂಟಾಗಬಹುದು:

- ರೆಟಿನಾ ಕೆಳಗಡೆ ಡ್ರುಸೆನ್ ಎಂದು ಕರೆಯಲಾಗುವ ವಸ್ತು ಸಂಗ್ರಹಗೊಳ್ಳುವುದು.
- ಕೆಲವು ಪ್ರಕರಣಗಳಲ್ಲಿ ರೆಟಿನಾ ಕೆಳಗಡೆ ಆಸಾಮಾನ್ಯ ರಕ್ತ ನಾಳಗಳ ಬೆಳವಣಿಗೆ ಉಂಟಾಗಬಹುದು.


## ವಯಸ್ಸಿಗೆ ಸಂಬಂಧಿಸಿದ ಮ್ಯಾಕುಲರ್ ಡೀಜನರೇಶನ್ ಯಾವುದರಿಂದ ಉಂಟಾಗುತ್ತದೆ?



60 ಅಥವಾ ಹೆಚ್ಚಿಗೆ ವಯಸ್ಸಾಗುವುದು




ಧೂಮಪಾನ



ಅನುವಂಶೀಯತೆ



ಅಧಿಕ ರಕ್ತದೊತ್ತಡ



ಹೃದಯ ಕಾಯಿಲೆ



ಸ್ಥೂಲಕಾಯ




ಅಧಿಕ ಕೊಲೆಸ್ಟ್ರಾಲ್



ಆ್ಯಂಟಿ-ಆಕ್ಸಿಡೆಂಟ್ ಕಡಿಮೆ ಸೇವನೆ

## ಎಎಮ್‌ಡಿ ಪ್ರಕಾರಗಳು

### ಒಣ ಎಎಮ್‌ಡಿ



ಇದನ್ನು ಪದರುಗಟ್ಟುವುದರೊಂದಿಗೆ ನಾನ್-ನಿಯೊವಾಸ್ಕ್ಯುಲರ್ ಮ್ಯಾಕುಲರ್ ಡೀಜನರೇಶನ್ ಎಂದು ಕೂಡ ಕರೆಯುತ್ತಾರೆ. ಮ್ಯಾಕುಲರ್ ಡೀಜನರೇಶನ್ ಹೊಂದಿದ ಹೆಚ್ಚಿನ ಜನರಲ್ಲಿ ಇದು ಶುಷ್ಕ ರೂಪದಲ್ಲಿರುತ್ತದೆ. ಈ ಸ್ಥಿತಿ ವಯಸ್ಸು ಮತ್ತು ಮ್ಯಾಕ್ಯುಲಾ ಅಂಗಾಂಶ ತೆಳುವಾಗುವುದರಿಂದ ಉಂಟಾಗುತ್ತದೆ.

### ಹಸಿ ಎಎಮ್‌ಡಿ



ಇದನ್ನು ನಿಯೊವಸ್ಕೂಲರ್ ಮ್ಯಾಕ್ಯುಲರ್ ಡೀಜನರೇಶನ್ ಎಂದು ಕೂಡ ಕರೆಯಲಾಗುತ್ತದೆ. ಸುಮಾರು 10 ಪ್ರತೀಶತ ಮ್ಯಾಕ್ಯುಲರ್ ಡೀಜನರೇಶನ್ ಜನರು ಇದರ ಹಸಿ ರೂಪ ಹೊಂದಿದವರಾಗಿದ್ದು, ಇದರಿಂದ ಒಣ ರೂಪಕ್ಕಿಂತ ಹೆಚ್ಚು ಕೇಂದ್ರ ಅಥವಾ ಡಿಟೇಲ್ ವಿಜನ್ ಹಾನಿಯುಂಟಾಗುತ್ತದೆ.


ರೆಟಿನಾ ಕೆಳಗಡೆ ಅಸಾಮಾನ್ಯ ರಕ್ತನಾಳಗಳು ಬೆಳೆದುಕೊಂಡಲ್ಲಿ ಹಸಿ ಮ್ಯಾಕ್ಯುಲರ್ ಡೀಜನರೇಶನ್ ಉಂಟಾಗುತ್ತದೆ. ಈ ರಕ್ತನಾಳದ ಬೆಳವಣಿಗೆಯನ್ನು ಕೊರಾಯಿಡಲ್ ನ್ಯೂಯೊವಸ್ಕ್ಯುಲರುಜೇಶನ್ (ಸಿಎನ್‌ವ್ಹಿ) ಎನ್ನುತ್ತಾರೆ ಯಾಕೆಂದರೆ ಈ ನಾಳಗಳು ಕೊರಾಯಿಡ್ ಎನ್ನುವ ರ್‍ಯಾಟಿನಾ ಕೆಳಗಡೆಯ ಪದರಿನಲ್ಲಿ ಬೆಳೆದುಕೊಳ್ಳುತ್ತವೆ. ಈ ಹೊಸ ರಕ್ತನಾಳಗಳು ದ್ರವ ಅಥವಾ ರಕ್ತ ಸೋರಿಕೆ ಮಾಡಿ ಕೇಂದ್ರ ದೃಷ್ಟಿ ಮಸುಕಾಗುವಂತೆ ಅಥವಾ ದೋಷಪೂರ್ಣವಾಗುವಂತೆ ಮಾಡುತ್ತವೆ.

ಈ ಮ್ಯಾಕ್ಯುಲರ್ ಡೀಜನರೇಶನ್ ರೂಪದಲ್ಲಿ ದೃಷ್ಟಿ ಹಾನಿ ಒಣ ಮ್ಯಾಕ್ಯುಲರ್ ಡೀಜನರೇಶನ್‌ಗಿಂತ ಶೀಘ್ರವಾಗಿ ಮತ್ತು ಗಣನೀಯವಾಗಿ ಉಂಟಾಗುತ್ತದೆ. ಹಸಿ ಮ್ಯಾಕ್ಯುಲರ್ ಡೀಜನರೇಶನ್ ಲಕ್ಷಣಗಳು ಸಾಮಾನ್ಯವಾಗಿ ಕಂಡು ಬಂದು ಬಹು ಬೇಗನೆ ಗಂಭೀರ ಸ್ವರೂಪ ಪಡೆದುಕೊಳ್ಳುತ್ತವೆ.


## ಚಿಹ್ನೆ ಮತ್ತು ಲಕ್ಷಣಗಳು




ಮಂದ ದೃಷ್ಟಿ



ಮಸುಕಾದ ಬಣ್ಣ



ಅಲೆ ಅಲೆಯಾದ ದೃಷ್ಟಿ




ಕೇಂದ್ರ ದೃಷ್ಟಿಯ ಹಾನಿ

## ಎಎಮ್‌ಡಿ ಯನ್ನು ಹೇಗೆ ನಿಭಾಯಿಸಬೇಕು?


### ತಪಾಸಣೆ:

### ಅಮಸ್ಲರ್ ಗ್ರಿಡ್




ನಿಮಗೆ ''ಮ್ಯಾಕ್ಯುಲರ್ ಡೀಜನರೇಶನ್'' ಉಂಟಾಗಿದ್ದಲ್ಲಿ, ಇದನ್ನು ಅಮಸ್ಲರ್ ಗ್ರಿಡ್‌ನಲ್ಲಿ ನಿಮ್ಮಷ್ಟಕ್ಕೆ ನೀವು ಪರೀಕ್ಷಿಸಿಕೊಳ್ಳಬಹುದು. ಆದರೆ ನೆನಪಿಡಿ ಇದು ಒಂದು ''ಒಟ್ಟಾರೆ'' ಪರೀಕ್ಷೆಯಾಗಿರುವುದು ಮತ್ತು ಇದರಿಂದ ಆರಂಭಿಕ ದೃಷ್ಟಿ ಹಾನಿ ಕಂಡು ಬರುವುದಿಲ್ಲ.

### ಆಪ್ಟಿಕಲ್ ಕೊಹೆರೆನ್ಸ್ ಟೊಮೊಗ್ರಾಫಿ (ಒಸಿಟಿ)



ಇದೊಂದು ರೋಗ ತಪಾಸಣೆಯ ತಂತ್ರವಾಗಿದ್ದು ಇದು ಹೈ ರೆಜೊಲ್ಯುಶನ್ ಚಿತ್ರದೊಂದಿಗೆ ಸ್ಪಷ್ಟ ಬಿಂಬವನ್ನು ಕೊಡುವುದು.

### ಫಂಡಸ್ ಫ್ಲುರೊಸೀನ್ ಎಂಜಿಯೊಗ್ರಾಫಿ (ಎಫ್‌ಎಫ್‌ಎ)




ಇದು ಕಣ್ಣಿನ ಹಿಂಬಂದಿಯ ಸಮಸ್ಯೆಯ ಬಗ್ಗೆ ಹೆಚ್ಚು ಮಾಹಿತಿ ಕೊಡಲು ಮಾಡಲಾಗುವ ವಿಧಿ ವಿಧಾನವಾಗಿರುತ್ತದೆ. ನಿಮ್ಮ ತೋಳಿನಲ್ಲಿ ಒಂದು ಡೈ ಇಂಜೆಕ್ಟ್ ಮಾಡಲಾಗುವುದು ನಂತರ ಅದು ನಿಮ್ಮ ರೆಟಿನಾ ನಾಳಗಳಲ್ಲಿ ಸಂಚರಿಸಿದಾಗ ಅದರಲ್ಲಿನ ಅಡೆತಡೆಗಳ ಚಿತ್ರ ತೆಗೆಯಲಾಗುವುದು.

## ಚಿಕಿತ್ಸೆ:

### ಒಣ ಎಎಮ್‌ಡಿ :


ಒಣ ಮ್ಯಾಕ್ಯುಲರ್ ಡೀಜನರೇಶನ್‌ಗಾಗಿ ಯಾವುದೇ ಒಂದು ಸಾಬೀತುಪಡಿಸಿದ ಚಿಕಿತ್ಸೆ ಎಂಬುದೇನಿಲ್ಲ. ಆದಾಗ್ಯೂ, ಕೆಲವು ಜನರಲ್ಲಿ ಆ್ಯಂಟಿ ಆಕ್ಸಿಡೆಂಟ್ ವಿಟಮಿನ್‌ಗಳು ಮತ್ತು ಜಿಂಕ್ ಇದು ಇನ್ನಷ್ಟು ಗಂಭೀರ ಸ್ವರೂಪ ಪಡೆದುಕೊಳ್ಳುವುದನ್ನು ನಿಧಾನಗೊಳಿಸುವುದರ ಮೂಲಕ ಮ್ಯಾಕ್ಯುಲರ್ ಡೀಜನರೇಶನ್ ಪರಿಣಾಮವನ್ನು ಕಡಿಮೆಗೊಳಿಸಬಹುದೆಂಬುದನ್ನು ದೊಡ್ಡ ಪ್ರಮಾಣದ ವೈದ್ಯಕೀಯ ಅಧ್ಯಯನಗಳು ತೋರಿಸಿಕೊಟ್ಟಿವೆ.



### ಹಸಿ ಎಎಮ್‌ಡಿ

#### ಆ್ಯಂಟಿ– ವಿಇಜಿಎಫ್ ಇಂಜೆಕ್ಷನ್ ಥೆರಪಿ:


ಪ್ರಸ್ತುತ – ಹಸಿ ವಯಸ್ಸಿಗೆ – ಸಂಬಂಧಿಸಿದ ಮ್ಯಾಕ್ಯುಲರ್ ಡೀಜನರೇಶನ್‌ಗೆ ಆ್ಯಂಟಿ– ವಿಇಜಿಎಫ್ ಥೆರಪಿ ಪರಿಣಾಮಕಾರಿ ಕ್ಲಿನಿಕಲ್ ಚಿಕಿತ್ಸೆಯಾಗಿರುತ್ತದೆ – ಇದರಲ್ಲಿ ''ಆ್ಯಂಟಿ–ವಿಇಜಿಎಫ್'' ಎನ್ನಲಾಗುವ ಔಷಧವನ್ನು ಇಂಟ್ರಾವಿಟ್ರಿಯಲ್ (ಕಣ್ಣಿನೊಳಗೆ) ಇಂಜೆಕ್ಷನ್ ಆಗಿ ಕೊಡಲಾಗುವುದು.



#### ಫೊಟೊಡೈನ್ಯಾಮಿಕ್ ಥೆರಪಿ (ಪಿಡಿಟಿ)

ಈ ಚಿಕಿತ್ಸೆಯಲ್ಲಿ ಮ್ಯಾಕ್ಯುಲಾದ ಕೇಂದ್ರ ಭಾಗದಲ್ಲಿರುವ ಹಸಿ ಮ್ಯಾಕ್ಯುಲರ್ ಡೀಜನರೇಶನ್ ಚಿಕಿತ್ಸೆಗಾಗಿ ಫೊಟೊಸೆನ್ಸಿಟೈಜರ್ ಎಂದು ಕರೆಯಲಾಗುವ ಲೈಟ್–ಆ್ಯಕ್ಟಿವೇಟೆಡ್ ಡ್ರಗ್ ಮತ್ತು ಒಂದು ವಿಶೇಷ ಲೋ–ಪಾವರ್ ಅಥವಾ ಕೂಲ್, ಲೇಸರ್ ಒತ್ತಟ್ಟಿಗೆ ಬಳಸಲಾಗುತ್ತದೆ.

#### ಲೇಸರ್ ಚಿಕಿತ್ಸೆ





ಲೇಸರ್ ಫೊಟೊಕೊಆಗುಲೇಶನ್ ಹಸಿ ಎಆರ್‌ಎಮ್‌ಡಿಗಾಗಿ ಮತ್ತೊಂದು ಚಿಕಿತ್ಸೆಯಾಗಿದೆ. ಈ ಚಿಕಿತ್ಸೆಯಲ್ಲಿ ಸೋರಿಕೆಯನ್ನು ತಡೆಗಟ್ಟಲೆಂದು ಹೊಸ ರಕ್ತನಾಳಗಳನ್ನು ಸೀಲ್ ಮಾಡಲು ಲೇಸರ್ ಲೈಟ್ ಬಳಸಲಾಗುವುದು.

## ದೈನಂದಿನ ಉಪಚಾರ

ಎಎಮ್‌ಡಿ ಬೆಳವಣಿಗೆಯನ್ನು ತಡೆಗಟ್ಟಲು ಅಥವಾ ನಿಧಾನಗೊಳಿಸಲು ಕೆಲವು ಮಾರ್ಗದರ್ಶಕ ತತ್ವಗಳು

- ನಿಯಮಿತವಾಗಿ ವ್ಯಾಯಾಮ ಮಾಡಿ
- ಕಡು ಹಸಿರು, ಹಸಿ ಪಾಲಕದಂಥ ಹಸಿರು ಸೊಪ್ಪಿನ ತರಕಾರಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸೇವಿಸಿ.
- ನಿಮ್ಮ ರಕ್ತ ಸಕ್ಕರೆಯಾಂಶ ಮತ್ತು ಕೊಲೆಸ್ಟ್ರಾಲ್ ನಿಯಂತ್ರಣದಲ್ಲಿ ಇಟ್ಟುಕೊಳ್ಳಿ.
- ಹೊರಗಡೆ ಹೋಗುವಾಗ ನಿಮ್ಮ ಕಣ್ಣುಗಳಿಗೆ ಹಾನಿಯುಂಟು ಮಾಡಬಹುದಾದ ಯುವಿ ಮತ್ತು ನೀಲಿ ಪ್ರಕಾಶವನ್ನು ತಡೆಗಟ್ಟುವ ಸೂಕ್ತವಾದ ಸನ್‌ಗ್ಲಾಸಿಸ್ ಹಾಕಿಕೊಳ್ಳಿ.
- ಕಣ್ಣಿನ ಆರೋಗ್ಯಕ್ಕೆ ಪ್ರಾಶಸ್ತ್ಯ ನೀಡಲೆಂದು ವರ್ಷದಲ್ಲಿ ಒಮ್ಮೆಯಾದರೂ ಕಣ್ಣಿನ ತಜ್ಞರನ್ನು ಭೇಟಿ ಮಾಡಿ.
- ಇವು ಕೂಡ ನಿಮ್ಮ ದೃಷ್ಟಿಯ ಮೇಲೆ ಪರಿಣಾಮ ಉಂಟು ಮಾಡುವುದರಿಂದ ಧೂಮಪಾನ, ಮದ್ಯಪಾನ ತ್ಯಜಿಸಿ.







## ಆ್ಯಂಟಿ–ವಿಇಜಿಎಫ್ ಇಂಜೆಕ್ಷನ್ ಥೆರಪಿ

ಇದು ವಯಸ್ಸಿಗೆ –ಸಂಬಂಧಿಸಿದ ಮ್ಯಾಕ್ಯುಲರ್ ಡೀಜನರೇಶನ್ ಗಾಗಿ ಅಂಗೀಕೃತ ಔಷಧೋಪಚಾರವಾಗಿದೆ.

## ಇದು ಹೇಗೆ ಕೆಲಸ ಮಾಡುತ್ತದೆ?





ಇದು ರೆಟಿನಾ ಹಿಂಬದಿಯಲ್ಲಿ ಹೊಸ ರಕ್ತನಾಳಗಳು ಹುಟ್ಟಿಕೊಳ್ಳದಂತೆ ತಡೆ ಒಡ್ಡುತ್ತದೆ ಮತ್ತು ರೆಟಿನಾ ಅನ್ನು ಸೋರಿಕೆ ಮುಕ್ತವನ್ನಾಗಿಸಿ ನಂತರದ ದೃಷ್ಟಿ ಹಾನಿಯ ಅಪಾಯವನ್ನು ಕಡಿಮೆಗೊಳಿಸುತ್ತದೆ.

ಔಷಧದ ಪರಿಣಾಮ ತಿಂಗಳವರೆಗೆ ಅಥವಾ ಅದಕ್ಕಿಂತ ಹೆಚ್ಚು ಸಮಯದವರೆಗೆ ಇರುತ್ತದೆ, ಆದ್ದರಿಂದ ನೀವು ತೆಗೆದುಕೊಳ್ಳಬೇಕಾದ ಇಂಜೆಕ್ಷನ್‌ಗಳ ಸಂಖ್ಯೆ, ನಿಮ್ಮ ಸಮಸ್ಯೆ ಮತ್ತು ನಿಮ್ಮ ವೈದ್ಯರ ಸಲಹೆಯನ್ನು ಅವಲಂಬಿಸಿರುತ್ತದೆ.

## ಲಾಭಗಳು

ಆ್ಯಂಟಿ–ವಿಇಜಿಎಫ್ ಇಂಜೆಕ್ಷನ್ ಚಿಕಿತ್ಸೆ ಮಹತ್ವದ ದೃಷ್ಟಿಯ ಗುಣಮಟ್ಟ ( ಬಣ್ಣ, ಬೆಳಕು ಮತ್ತು ತೀಕ್ಷ್ಣತೆ ) ಸುಧಾರಿಸುತ್ತದೆ ಮತ್ತು ನಿಮ್ಮ ಜೀವನದ ಗುಣಮಟ್ಟದ ಮೇಲೆ ಪರಿಣಾಮವನ್ನುಂಟು ಮಾಡುವ ಓದುವ, ಟೆಲಿವಿಜನ್ ನೋಡುವ, ಕಾರ್ ಡ್ರೈವಿಂಗ್ ಮಾಡುವಂತಹ ಹಲವಾರು ಚಟುವಟಿಕೆಗಳನ್ನು ಸುಧಾರಿಸುತ್ತದೆ.





**ಘೋಷಣೆ:** ಈ ವಿಷಯ ವಸ್ತು ನಿಮ್ಮ ಮಾಹಿತಿಗೆಂದು ಮಾತ್ರ ಇರುತ್ತದೆ. ಇದು ನಿಮ್ಮ ವೈದ್ಯರ ಅಥವಾ ಆರೋಗ್ಯ ಉಪಚಾರಕರ ಸಲಹೆಯ ಅಥವಾ ಸಮಾಲೋಚನೆಯ ಪರಿಹಾರವಾಗಲಾರದು. ಮಾಹಿತಿಯನ್ನು ಸಾಧ್ಯವಾದಷ್ಟು ನಿಖರವಾಗಿ ಮತ್ತು ಸಮಯಕ್ಕನುಸಾರವಾಗಿ ಇರಲು ನಾವು ಸಾಧ್ಯವಾದಷ್ಟು ಪ್ರಯತ್ನಿಸಿದ್ದೇವೆ, ಆದರೆ ಈ ವಿಷಯದಲ್ಲಿ ಭರವಸೆ ನೀಡಲಾಗುವುದಿಲ್ಲ. ನೀವು ನಿಮ್ಮ ಕಣ್ಣಿನ ತಜ್ಞರಾಗಲಿ ಅಥವಾ ಆರೋಗ್ಯ ಉಪಚಾರಕರಾಗಲಿ ಅವರ ಸಲಹೆಯನ್ನು ಪಡೆದುಕೊಂಡು ಈ ವಿಷಯದಲ್ಲಿ ಮುಂದುವರಿಯಬೇಕು.


INTAS

**INTAS PHARMACEUTICALS LIMITED**

Near Sola Bridge, S.G. Highway, Thaltej,
Ahmedabad – 380054, Gujarat, INDIA.
Website : www.intaspharma.com


RAZUMAB™
Ranibizumab 0.5 mg Injection


2122540 Kannada